**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಐವನ್ ಡಿ' ಸೋಜಾ ಇವರು ನಿಯಮ-72 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ**

~****~

**ಪ್ರಶ್ನೆ**

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಡಳಿತಾಧಿಕಾರಿ ನೇಮಕಗೊಂಡು 7 ತಿಂಗಳು ಕಳೆದರೂ ನ್ಯಾಯಾಲಯದ ನಿರ್ದೇಶನದಂತೆ ಅಕ್ಟೋಬರ್ 31ರ ಒಳಗೆ ಚುನಾವಣೆ ನಡೆಸಬೇಕೆಂದು ಸೂಚಿಸಿದ್ದರೂ ಚುನಾವಣೆ ನಡೆಸದೇ ಇದ್ದು, ಇತರ ಮಹಾನಗರ ಪಾಲಿಕೆಯಲ್ಲಿ ಇಂತಹುದೇ ವಿಚಾರಗಳು ಇರುವುದರ ಬಗ್ಗೆ ಮಾನ್ಯ ಕಂದಾಯ ಮತ್ತು ಪೌರಾಡಳಿತ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ**

ಅಧಿಸೂಚನೆ ಸಂಖ್ಯೆ ನಅಇ 67 ಎಂಎಲ್ಆರ್ 2018(10), ದಿನಾಂಕ 10.08.2018ರಲ್ಲಿ 2011ರ ಜನಗಣತಿಯನ್ನಾಧರಿಸಿ ಮಂಗಳೂರು ಮಹಾನಗರಪಾಲಿಕೆಯ 60 ವಾರ್ಡ್‌ಗಳಿಗೆ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಸದರಿ ಅಧಿಸೂಚನೆಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳಲ್ಲಿ ನ್ಯಾಯಾಲಯವು ದಿನಾಂಕ 14.01.2019ರಂದು ತೀರ್ಪು ನೀಡಿ ಮಂಗಳೂರು ಮಹಾನಗರಪಾಲಿಕೆಯ ವಾರ್ಡ್‌ವಾರು ಮೀಸಲಾತಿಯನ್ನು ರದ್ದುಪಡಿಸಿರುತ್ತದೆ.

ರಿಟ್ ಅರ್ಜಿ ಸಂಖ್ಯೆ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳಲ್ಲಿ ದಿನಾಂಕ 14.01.2019ರಂದು ನೀಡಲಾದ ತೀರ್ಪನ್ನು ಪ್ರಶ್ನಿಸಿ, ಸರ್ಕಾರವು ರಿಟ್ ಅಪೀಲು ಸಂಖ್ಯೆ 318/2019 ದಾಖಲಿಸಿದ್ದು, ಈ ರಿಟ್ ಅಪೀಲು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 31.05.2019ರಂದು ತೀರ್ಪು ನೀಡಿ, ರಿಟ್ ಅರ್ಜಿ ಸಂಖ್ಯೆ ರಿಟ್ ಅರ್ಜಿ ಸಂಖ್ಯೆ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳಲ್ಲಿ ನೀಡಲಾದ ದಿನಾಂಕ 14.01.2019ರ ತೀರ್ಪನ್ನು ರದ್ದುಪಡಿಸಿರುತ್ತದೆ.

ಮಂಗಳೂರು ಮಹಾನಗರಪಾಲಿಕೆಯ ವಾರ್ಡುಗಳಿಗೆ ಚುನಾವಣೆ ನಡೆಸುವಂತೆ ನಿರ್ದೇಶನ ನೀಡುವಂತೆ ಕೋರಿ ಶ್ರೀ ಅಬ್ದುಲ್ ಗಫೂರ್ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ 33056/2019 PIL ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 27.08.2019ರಂದು ತೀರ್ಪು ನೀಡಿ, ಮಂಗಳೂರು ಮಹಾನಗರಪಾಲಿಕೆಯ ವಾರ್ಡುಗಳಿಗೆ ದಿನಾಂಕ 15.11.2019ರೊಳಗೆ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ (ಪ್ರತಿವಾದಿ-2) ನಿರ್ದೇಶನ ನೀಡಿರುತ್ತದೆ. ನ್ಯಾಯಾಲಯದ ಆದೇಶದನ್ವಯ ರಾಜ್ಯ ಚುನಾವಣಾ ಆಯೋಗವು ಮಂಗಳೂರು ಮಹಾನಗರಪಾಲಿಕೆಯ ವಾರ್ಡುಗಳಿಗೆ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಇನ್ನುಳಿದ, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ, ಬೆಳಗಾವಿ ಮಹಾನಗರಪಾಲಿಕೆ, ಬಳ್ಳಾರಿ ಮಹಾನಗರಪಾಲಿಕೆ, ಕಲಬುರ್ಗಿ ಮಹಾನಗರಪಾಲಿಕೆ, ವಿಜಯಪುರ ಮಹಾನಗರಪಾಲಿಕೆ ಹಾಗೂ ದಾವಣಗೆರೆ ಮಹಾನಗರಪಾಲಿಕೆಯ ವಾರ್ಡ್‌ವಾರು ಮೀಸಲಾತಿಗಳು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಧಾರವಾಡ ಹಾಗೂ ಕಲಬುರ್ಗಿ ಇಲ್ಲಿ ಪ್ರಶ್ನಿತವಾಗಿದ್ದು, ನ್ಯಾಯಾಲಯ ಪ್ರಕರಣಗಳು ಇತ್ಯರ್ಥವಾದ ನಂತರ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ:ನಅಇ 09 ಎಲ್‌ಸಿಕ್ಯೂ 2019

(ಆರ್. ಅಶೋಕ್)
ಕಂದಾಯ ಮತ್ತು ಪೌರಾಡಳಿತ ಸಚಿವರು